

ಊಟದ ಸಮಯದಲ್ಲಿ ಮತ್ತೆ ವಿಚಾರ ವಿನಿಮಯ. ನಾನು ತೋರಿದ ಸಿಸಿ ಕ್ಯಾಮೆರಾದ ಫೂಟೇಜನ್ನು ಕರಮಚಂದ ಆಸ್ಥೆಯಿಂದ ವೀಕ್ಷಿಸಿದ. 'ಚೆನ್ನಾಗಿ ಕೆಲಸ ಮಾಡಿದ್ದೀ. ನಾನು ಹೋದ ಕೆಲಸ ಪೂರ್ಣವಾಗಿಲ್ಲ. ಹಳೆಯ ಘಟನೆಗಳಾದ್ದರಿಂದ ಸಿಸಿ ಕ್ಯಾಮೆರಾದ ಫೂಟೇಜು ಲಭ್ಯವಿಲ್ಲದ ಕಾರಣ, ಗಿರಾಕಿಗಳ ನೆನಪನ್ನೇ ಆಧರಿಸಬೇಕಾಯಿತು. ಹೆಚ್ಚಿನವರಿಗೆ ಯಾರು ಬಂದದ್ದು ಎಂಬ ನೆನಪೇ ಇರಲಿಲ್ಲ. ಆದರೆ ಕೆಲವೆಡೆ ಗೊಂದಲಗಳು ಕಾಣಿಸಿದವು. ಉದಾಹರಣೆಗೆ, ನಾಪೋಕ್ಲುವಿನ ಒಬ್ಬ ಗಿರಾಕಿ ಹಣ ವಸೂಲಿಗೆ ತಮ್ಮಯ್ಯ ಮತ್ತು ಜೊತೆಯಲ್ಲೊಬ್ಬ ಬಂದಿದ್ದ ಎಂದ. ಅಲ್ಲಿಯೇ ಪಕ್ಕದ ರಸ್ತೆಯಲ್ಲಿದ್ದವನು, ತಮ್ಮಯ್ಯ ಬರಲಿಲ್ಲ, ಯಾರೋ ಹೊಸಬ ಬಂದಿದ್ದ ಅಂತಂದ. ಹಾಗಿದ್ದರೆ ಕೆಲವು ಅಂಗಡಿಗಳಿಗೆ ತಮ್ಮಯ್ಯ ಏಕೆ ಹೋಗಲಿಲ್ಲ? ಆದರೆ ಎರಡೂ ಕಡೆಗಳಲ್ಲಿ ನೀಡಲಾಗಿದ್ದು ಅದೇ ಕಳವು ಮಾಡಿದ ರಸೀದಿಗಳು. ಹಾಗಾಗಿ, ಎಲ್ಲಾ ಅಂಗಡಿ ಮಾಲೀಕರ ಕರೆ ವಿವರ ಪರಿಶೀಲಿಸಲು, ಮೊಬೈಲ್ ಕಂಪೆನಿಗಳಿಂದ ಮಾಹಿತಿ ಯಾಚಿಸಿದ್ದೇನೆ. ನಾಳೆ ದೊರಕಬಹುದು. ತಮ್ಮಯ್ಯ ಭೇಟಿ ನೀಡಿದ ಅಂಗಡಿಗಳ ಮಾಲೀಕರ ಜೊತೆಗೆ ಆತನಿಗೆ ಹೆಚ್ಚಿನ ಸ್ನೇಹವಿದ್ದರೆ, ಆತ ಭೇಟಿ ನೀಡಿದ್ದಕ್ಕೆ ಸಮರ್ಥನೆ ಸಿಗುತ್ತದೆಯಲ್ವೇ?' 'ಹಾಗಿದ್ದರೆ ಅಲ್ಲಿಯವರೆಗೆ ಕಾಯಬೇಕೇ?' 'ನಂತರ ನಾವು ಡಿಸೋಜನನ್ನು ಭೇಟಿಯಾಗಿ, ವಿವರಗಳನ್ನು ನೀಡುವ. ನೀನು ದಣಿದಂತೆ ತೋರುತ್ತಿದೆ. ವಿಶ್ರಾಂತಿ ತೆಗೆದುಕೋ. ನನಗೊಂದು ಸಣ್ಣ ಕೆಲಸವಿದೆ. ಪ್ರವೀಣನು ಜಿಗಿಯುವಾಗ, ಘಟ್ಟಿಸಿದ ಛಾವಣಿಯ ಮನೆಯ ಮಾಲೀಕ ತಿಮ್ಮರಾಜುವನ್ನು ನಾವು ವಿಚಾರಿಸಲೇ ಇಲ್ಲ! ಆತನನ್ನೊಮ್ಮೆ ಕಂಡು ಬರುತ್ತೇನೆ. ಆತನಿಗೇನಾದರೂ ಸದ್ದು ಕೇಳಿಸಿತೇ ಅಂತ ತಿಳೀಬೇಕಿತ್ತು. ರಾತ್ರಿ ಸಿಗ್ತೀನಿ ಅಂದಿದ್ದ. ಇನ್ನೊಂದು ಚಿಕ್ಕ ಅನುಮಾನ. ಪ್ರವೀಣನು ಎಡಚನೇ?' ಕರಮಚಂದನ ಪ್ರಶ್ನೆ ವಿಚಿತ್ರವಾಗಿತ್ತು. ನನ್ನ ಬಳಿ ಅದಕ್ಕೆ ಉತ್ತರವಿರಲಿಲ್ಲ. 'ನಾಳೆ ತಮ್ಮಯ್ಯನಲ್ಲಿ ಕೇಳೋಣ.' ಹಾಗೆಂದು ಕರಮಚಂದ ಬಾಗಿಲು ಎಳೆದು, ಮೆಟ್ಟಿಲಿಳಿದು ಹೋದ.

* * *

ಮರುದಿನ ಸಂಜೆ ನಾಲ್ಕರ ಹೊತ್ತಿಗೆ ನಾವು ಠಾಣೆಯಲ್ಲಿದ್ದೆವು. ಸಿಸಿ ಕ್ಯಾಮೆರಾದ ತುಣುಕುಗಳು, ಗಿರಾಕಿಗಳಿಗೆ ನೀಡಿದ ನಕಲಿ ರಸೀದಿಗಳ ಪಟಗಳು, ಮುತ್ತಪ್ಪ ಕೊಟ್ಟ ಹಣ ವಂಚನೆ ನಡೆದ ಗಿರಾಕಿಗಳ ಖಾತೆ ಪುಸ್ತಕಗಳನ್ನು ಹಸ್ತಾಂತರಿಸಿದೆವು. 'ಪ್ರವೀಣನ ಆತ್ಮಹತ್ಯೆ ಪತ್ರವನ್ನು ಮುತ್ತಪ್ಪ ನೀಡಿದ್ದಾನೆ. ಈಗ ಅದಕ್ಕೆ ಇನ್ನಷ್ಟು ಬಲ ಬಂದಂತಾಗಿದೆ. ಸ್ಪಷ್ಟವಾಗಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ. ಆರೋಪ ಪಟ್ಟಿ ದಾಖಲಿಸುತ್ತೇನೆ. ನೀವು ಸಂಗ್ರಹಿಸಿದ ಸಾಕ್ಷ್ಯಗಳೆಲ್ಲವೂ ನಿಮ್ಮ ಕಕ್ಷಿದಾರನಿಗೆ ವಿರುದ್ಧವಾಗಿಯೇ ಇವೆ!' ಡಿಸೋಜ ನಗೆ ಹಾರಿಸಿದ. 'ಇದೊಂದು ಮಾತ್ರ ತಮ್ಮಯ್ಯನ ಪರವಾಗಿದೆ' ಕರಮಚಂದ ತನ್ನ ಮೊಬೈಲ್‌ನಲ್ಲಿದ್ದ ಕಡತವನ್ನು ಅಧಿಕಾರಿಗೆ ತೋರಿದ.

'ಇವೇನಿದು? ಚರವಾಣಿಯ ಕರೆ ವಿವರಗಳು. ಯಾರದ್ದು?'

'ಇದು ನಾಪೋಕ್ಲುವಿನ ಕೆಲವು ಗಿರಾಕಿಗಳ ಮಾಲಿಕರದ್ದು. ಹಣವನ್ನು ತಮ್ಮಯ್ಯ ತೆಗೆದುಕೊಂಡು ಹೋಗಿದ್ದಾನೆ ಅಂತ ಹೇಳಿದವರು. ಎಲ್ಲರ ಕರೆಗಳ